ದಿನಾಂಕ: 07-02-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ವಕೀಲರಿಂದ :-

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯ ಇದ್ದು, ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ಪಾಟೀ ಸವಾಲು : ಶ್ರೀ ಎನ್.ಜಿ. ವಕೀಲರಿಂದ :-

1. ನನ್ನ ತಾಯಿಯ ಹೆಸರು ಕರಿಯಮ್ಮ. 2 ನೇ ವಾದಿಯ ಗಂಡನ ಹೆಸರು ಕರಿಯಪ್ಪ. ನನ್ನ ತಾಯಿ 2 ನೇ ವಾದಿಯ ಗಂಡನ ಸಹೋದರಿ ಅಂದರೆ ಸರಿ. ಆ ಕಾರಣದಿಂದಾಗಿ ನಾನು ವಾದಿಯರ ಪರವಾಗಿ ಸಾಕ್ಷ್ಯವನ್ನು ನುಡಿಯಲು ಬಂದಿರುತ್ತೇನೆ ಅಂದರೆ ಸರಿ. ವಾದಿಯರ ತಂದೆ ಬೋಗಪ್ಪನಿಗೆ ಆತನೂ ಸೇರಿದಂತೆ 3 ಜನ ಅಣ್ಣ-ತಮ್ಮಂದಿರುತ್ತಾರೆ. ಅವರಿಗೆ ಮತ್ತೊಬ್ಬ ಸಹೋದರ ತಿಮ್ಮಣ್ಣ ಎನ್ನುವವರು ಇರುತ್ತಾರೆ ಅಂದರೆ ಸರಿ. ಸದರಿ ಭೋಗಪ್ಪ ಹಾಗೂ ಆವರ ಸಹೋದರರು ಯಾವಾಗ ಭಾಗ ಆದರು ಅಂತ ನನಗೆ ಗೊತ್ತಿಲ್ಲ. ತಿಮ್ಮಪ್ಪ ಭಾಗ ತೆಗೆದುಕೊಂಡು 40-45 ವರ್ಷ ಆಗಿರುತ್ತದೆ. ಭೋಗಪ್ಪ ಭಾಗ ತೆಗೆದುಕೊಂಡಿರುವುದಿಲ್ಲ. 1953 ರಲ್ಲಿ ಆದ ಪಾಲುಪಾರಿಕತ್ತಿನ ವಿಚಾರ ನನಗೆ ಗೊತ್ತಿಲ್ಲ. 1974 ರಲ್ಲಿ ಆದ ವಿಲ್ಲಿನ ವಿಚಾರ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಸಂಖ್ಯೆ, ವಿಸ್ತೀರ್ಣ ಮತ್ತು ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಯಾವ ಯಾವ ಸ್ವತ್ತುಗಳನ್ನು ಯಾರು ಯಾರು ಅನುಭವಿಸುತ್ತಿದ್ದಾರೆ ಅಂತ ನನಗೆ ಗೊತ್ತಿಲ್ಲ. ಈ ದಾವೆಯನ್ನು 3 ಜನರ ವಿರುದ್ಧ ವಾದಿಯರು ಸಲ್ಲಿಸಿರುತ್ತಾರೆ. ಮುಂದುವರೆದು ಇಬ್ಬರ ವಿರುದ್ಧ ಸಲ್ಲಿಸಿರುತ್ತಾರೆ ಅಂತ ನುಡಿಯುತ್ತಾರೆ.

2. ವಾದಿಯರು ಮಾಚೇನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ವಾದಿಯರು ತಮ್ಮ ಗಂಡಂದಿರ ಮನೆಯಲ್ಲಿ ವಾಸವಾಗಿರುತ್ತಾರೆ. 1 ನೇ ವಾದಿ ಯಾವ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾರೆ ಮತ್ತು 2 ನೇ ವಾದಿ ಯಾವ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾರೆ ಅಂತ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1953 ರಿಂದಲೂ ಸಹ ಭೋಗಪ್ಪ ಮತ್ತು ಆತನ ಸಹೋದರರು ಬೇರೆ ಬೇರೆಯಾಗಿ ಸ್ವತ್ತುಗಳನ್ನು ಅನುಭವಿಸುತ್ತಿದ್ದಾರೆ ಅಂದರೆ ಸರಿಯಲ್ಲ. ಭೋಗಪ್ಪ ಮತ್ತು ಆತನ ಸಹೋದರರು ಬಹಳ ಹಿಂದೇ ಭಾಗವಾಗಿದ್ದರೂ ಒಟ್ಟಿಗೆ ಅನುಭವಿಸುತ್ತಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ